

Asia Floor Wage
ಹೊಲಿಯೋಣ
ಯೋಗ್ಯ ವೇತನವನ್ನು
ಗಡಿಯುದ್ದಗಲಕ್ಕೂ


ಏಷ್ಯಾದ ಗಾರ್ಮೆಂಟ್ ಉತ್ಪಾದನಾ ಘಟಕ ಒಂದರಲ್ಲಿ....
ಕಾರ್ಮಿಕರು ಯೂನಿಯನ್ ಸಭೆ ನಡೆಸುತ್ತಿದ್ದಾರೆ......
UNION OFFICE
ASIA FLOOR WAGE
ಈ ರೀತಿ ಹೇಗೆ ಜೀವನ ಮಾಡೋದು? ನನ್ನ ಮಕ್ಕಳಿಗೆ ಹಾಲು ಸಹ ತಗೊಳೊಕ್ಕೆ ಆಗಲ
ನಮಗೆ ಕೊಡೋದೇ ಕಮ್ಮಿ ಸಂಬಳ. ಮೇಲಾಗಿ ಮಾಲೀಕ ಒಂದುವರೆ ತಿಂಗಳಿಂದ ಸಂಬಳನೇ ಕೊಟ್ಟಿಲ್ಲ!
ರಂಗನ ಕತೆ ನೋಡಿ, ಕಾನೂನು ಬದ್ಧ ಓ.ಟಿ. ಕೇಳಿದ್ದಕ್ಕೆ .....ಅವನನ್ನು ...
ಕೆಲಸದಿಂದ ತೆಗೆದೇಬಿಟ


ನನಗೇನು ಅನ್ನಿಸ್ತಾ ಇದೆ ಅಂದರೆ ನನಗೆ ಮಾತ್ರ ಕಡಿಮೆ ಸಂಬಳ ಕೊಡುತ್ತಿದ್ದಾರೋ ಅಥವ ಎಲ್ಲರಿಗೂ ಹೀಗೇನಾ
ನಿಮಗೆ ಆಶ್ಚರ್ಯವಾಗಬಹುದು! ಏಷ್ಯಾದ ಎಲ್ಲ ಕಡೆಗಳಲ್ಲೂ ಗಾರ್ಮೆಂಟ್ ಕಾರ್ಮಿಕರಿಗೆ ಹೆಚ್ಚುಕಮ್ಮಿ ಇಷ್ಟೇ ಸಂಬಳ.
ಅದು ತೀರಾ ಶೋಚನೀಯ! ನಾವೇ ವಿಶ್ವಕ್ಕೆ ಬೇಕಾಗಿರುವ ಬಹುಭಾಗ ಬಟ್ಟೆ ತಯಾರಿಸುವವರು
ಆದರೂ ಈ ಬಗ್ಗೆ ನಾವೇನು ಮಾಡಲು ಸಾಧ್ಯ?
ಅಥವಾ ನಮ್ಮ ಯೂನಿಯನ್ ಏನು ಮಾಡಬಹುದು?ಒಂದಾದರೆ ನಾವು ಬಲಿಷ್ಠರು!
ಏಷ್ಯಾದುದ್ದಗಲಕ್ಕೂ ಯೂನಿಯನ್‌ಗಳು ಏಷ್ಯಾ ತಳಮಟ್ಟದ ವೇತನ ಆಂದೋಲನವನ್ನು ಸೇರಿಕೊಳ್ಳುತ್ತಿವೆ! ನಾವೆಲ್ಲರೂ ಅನುಕೂಲಕರ ಜೀವನ ನಡೆಸಲು ಬೇಕಾದ ಮೂಲ ವೇತನವನ್ನು ಈ ಆಂದೋಲನ ಬೇಡುತ್ತಿದೆ.
Asia Floor Wage




ನಾಲ್ಕು ಮಂದಿಯ ಒಂದು ಕುಟುಂಬಕ್ಕೆ:




ಇವೆಲ್ಲಾ ಒಂದು ಕಾರ್ಮಿಕ ಕುಟುಂಬದ ಮೂಲ ಅವಶ್ಯಕತೆಗಳು.
ಮತ್ತೆ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಆಹಾರದಲ್ಲಿ ವ್ಯತ್ಯಾಸಗಳಿದ್ದರೂ......
..ನಮಗೆಲ್ಲರಿಗೂ ಇರುವುದು ಒಂದೇ ರೀತಿಯ ಹೊಟ್ಟೆ!
ಆದರೆ ಕೇವಲ ಆಹಾರ ಸೇವಿಸಿ ಜೀವಿಸಲು ಸಾಧ್ಯವಿಲ್ಲ!
ನಾವು ಬೇರೆ ಅಗತ್ಯತೆಗಳಿಗೂ ಖರ್ಚು ಮಾಡಬೇಕಾಗುತ್ತದೆ..
ಉಡಲು ಬಟ್ಟೆ ಬೇಕು,
ಇರಲು ಮನೆಬೇಕು!
ನಮ್ಮ ಮಕ್ಕಳು ಶಾಲೆಗೆ ಹೋಗಬೇಕು! ನಾವು ಇವುಗಳನ್ನು ಆಹಾರೇತರ ಖರ್ಚು ಎಂದು ಪರಿಗಣಿಸುತ್ತೇವೆ!
ನೀ ಹೇಳೋದು ಸರಿ! ನಮ್ಮ ಆಹಾರೇತರ ಖರ್ಚುಗಳು ನಮ್ಮ ಆಹಾರದ ಖರ್ಚಿನಷ್ಟೇ ಇವೆ.




*ಇವುಗಳು ಮಾಸಿಕ ವೇತನಗಳು


ಇದು ನಾವು ಸಾಧರಣ ಕೆಲಸದ ವೇಳೆಯಲ್ಲಿ ಗಳಿಸಬೇಕಾದ ಮೂಲ ತಳಮಟ್ಟದ ವೇತನ...
ಇದರಲ್ಲಿ ನಮ್ಮ ಓ.ಟಿ............
ಹಾಗೂ ನಮ್ಮಉದ್ಯೋಗದ ಸೌಲಭ್ಯಗಳಿರುವುದಿಲ್ಲ
ಆದರೆ ನನಗೊಂದು ಪ್ರಶ್ನೆ ಇದೆ....
ನನ್ನ ಚಿಂತನೆ....... ನಾವು ಹೆಚ್ಚಿಗೆ ದುಭಾರಿಯಾದರೆ...
ನಮ್ಮ ಕಾರ್ಖಾನೆಗಳು ಸ್ಥಳಾಂತರ ಆಗಿ.........
ನಾನು ಕೆಲಸ ಕಳೆದುಕೊಳ್ಳಬಹುದು...


ಈ ಪ್ರಶ್ನೆ ಕೇಳಿದ್ದು ಒಳ್ಳೆದಾಯಿತು! ಯಾವುದದರೂ ಒಂದೇ ದೇಶ ಈ ರೀತಿ ವೇತನ ಹೆಚ್ಚಳಕ್ಕೆ ಹೋರಾಡುತ್ತಿದ್ದರೆ ಹೀಗಾಗಲು ಸಾಧ್ಯ...
ಆದರೆ, ಈ ಆಂದೋಲನವು ಇಡೀ ವಿಶ್ವದುದ್ದಗಲಕ್ಕೂ ನಡೆಯುತ್ತಿದ್ದು ಒಂದು ಸಾಮಾನ್ಯ ಬೇಡಿಕೆಗಾಗಿ,ಎಲ್ಲ ಯೂನಿಯನ್ ಒಂದುಗೂಡುತ್ತಿವೆ!
ಅದೇ ಆಂದೋಲನದ ಬಲ!
ಯಾಕೆಂದರೆ ನಾವೆಲ್ಲರೂ ಸೇರಿ ಒಂದೇ ಸಮಯದಲ್ಲಿ ಇದನ್ನು ಮಾಡುತ್ತಿದ್ದೇವೆ!
ಮೇಲಾಗಿ ನಾವು ಗಾರ್ಮೆಂಟ್ ಉತ್ಪಾದನಾ ಉಧ್ಯಮದ ಕೇಂದ್ರವಾಗಿದ್ದೇವೆ!
ಅವರಿಗೆ ಸ್ಥಳಾಂತರ ಮಾಡುವುದು ಅಷ್ಟೊಂದು ಸುಲಭವಲ್ಲ! ಚಿಂತಿಸಬೇಡಿ!
ಅದಲ್ಲದೆ,ನಾವು ಯಾವ ದೊಡ್ಡ ಕಂಪೆನಿಗಳಿಗೆ ರಫ್ತು ಮಾಡ್ತಿವೋ ಅವುಗಳು ಖಂಡಿತವಾಗಿಯೂ ನಮಗೆ ಇನ್ನೂ ಹೆಚ್ಚು ವೇತನ ನೀಡಬಲ್ಲವು!
ಅವು ಗಳಿಸುವ ಲಾಭವನ್ನು ನಿಮಗೆ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ...
ಉದಾಹರಣೆಗೆ ಅಮೇರಿಕಾದಲ್ಲಿ ಮಾರುವ ಪ್ರತಿಯೊಂದು ಟೀ-ಶರ್ಟ್...


ಚಿಲ್ಲರೆ ಮಾರಾಟ ಬೆಲೆ
$ 22.50
ಶ್ರಮಕ್ಕೆ (ವೇತನ)
2.8%
($ 0.64)
ಲಾಭ
75%
ಇತರೆ ವೆಚ್ಚಗಳು
23.1%


ಅಷ್ಟೇನಾ!?
ಖಂಡಿತವಾಗಿಯೂ ನಮಗೆ
ಹೆಚ್ಚಿನ ವೇತನ ಕೊಡಲು
ಅವರು ಸಮರ್ಥರು!
ಸಂಶಯವೇ ಇಲ್ಲ!


ಹಾಗಾದರೆ, ನಾವು ಈ ಆಂದೋಲನದಲ್ಲಿ ಸೇರಿಕೊಳ್ಳುವುದು ಹೇಗೆ?
ನಾನು ಹೇಳಿದ ಹಾಗೆ, ನಾವು ಯೂನಿಯನ್ ಸೇರಿಕೊಳ್ಳಬೇಕು ಮತ್ತು ಯೂನಿಯನ್ ಈ ಆಂದೋಲನವನ್ನು ಸೇರಿಕೊಳ್ಳುವ ಅವಶ್ಯಕತೆ ಇದೆ!
ಹಾಗಾದರೆ ನಮ್ಮ ಯೂನಿಯನ್‌ಗಳು ಈ ಆಂದೋಲನದಲ್ಲಿ ಭಾಗಿಯಾಗುವಂತೆ ಖಚಿತಪಡಿಸಿಕೊಳ್ಳೋಣ!
ಒಂದಾದಾಗ ನಾವು ಪ್ರಬಲರು!
Asia Floor Wage
ಹೊಲಿಯೋಣ ಯೋಗ್ಯ ವೇತನವನ್ನು ಗಡಿಯುದ್ದಗಲಕ್ಕೂ

# ಪದೇ ಪದೇ ಕೇಳಲಾದ  ಪ್ರಶ್ನೆಗಳು ಮತ್ತು ಉತ್ತರಗಳು

**ಏಷ್ಯಾ ತಳಮಟ್ಟದ ವೇತನ ಆಂದೋಲನವೆಂದರೇನು?**

ಏಷ್ಯಾ ತಳಮಟ್ಟದ ವೇತನ ಆಂದೋಲನವು, ಏಷ್ಯಾದಲ್ಲಿನ ಗಾರ್ಮೆಂಟ ಉತ್ಪಾದನೆ ಮಾಡುವ ಒಂದು ಪ್ರಾದೇಶಿಕ ಯೋಗ್ಯ ವೇತನವನ್ನು ನಿಗಧಿ ಪಡಿಸಲು ಒತ್ತಾಯಿಸುವ ಆಂದೋಲನ.

**ಏಷ್ಯಾ ತಳಮಟ್ಟದ ವೇತನ ಆಂದೋಲನದಲ್ಲಿ ಯಾರ್‍ಯಾರು ಭಾಗಿಗಳು?**

ಇಂಡಿಯಾ, ಇಂಡೋನೇಷಿಯಾ, ಚೀನಾ,ಬಾಂಗ್ಲಾ ದೇಶ, ಥೈಲ್ಯಾಂಡ್, ಹಾಂಗ್ ಕಾಂಗ್, ಮಲೇಷಿಯಾ, ಪಾಕಿಸ್ತಾನ, ಕಂಬೋಡಿಯಾ, ಐರೋಪ, ಯುನೈಟಡ್ ಕಿಂಗ್‌ಡಮ್, ಕೆನಡಾ ಮತ್ತು ಆಮೇರಿಕಾದಲ್ಲಿನ ಯೂನಿಯನ್‌ಗಳು ಹಾಗೂ ಕಾರ್ಮಿಕ ಹಕ್ಕು ಗುಂಪುಗಳು ಈಗಾಗಲೇ ಆಂದೋಲನದ ಭಾಗಿಯಾಗಿವೆ. ದಿನೇ ದಿನೇ ಹೊಸ ಗುಂಪುಗಳು ಸೇರುತ್ತಲೇ ಇವೆ.

**ನಾನು ಈ ಆಂದೋಲನದಲ್ಲಿ ಹೇಗೆ ಸೇರುವುದು?**

ಆಂದೋಲನವನ್ನು  ಸೇರಲು, ನಿಮ್ಮ ಕಾರ್ಮಿಕ ಸಂಘಟನೆಯನ್ನು ಏಷ್ಯಾ ತಳಮಟ್ಟದ ವೇತನದ ಆಂದೋಲನವನ್ನು ಸೇರಿಕೊಳ್ಳಲು ಹಾಗೂ ವಿಶ್ವದಾದ್ಯಂತ ಇತರೆ ಯೂನಿಯನ್‌ಗಳೊಂದಿಗೆ ಹಾಗೂ ಕಾರ್ಮಿಕ ಸಂಘಟನೆಗಳೊಂದಿಗೆ ಒಂದುಗೂಡಲು ಹೇಳಿ!

**ನಾವು ವೇತನ ಹೆಚ್ಚಳಕ್ಕಾಗಿ ಹೋರಾಡಿದರೆ, ನಾನು ಕೆಲಸ ಮಾಡುವ ಕಾರ್ಖಾನೆಯು ದೂರಕ್ಕೆ ಸ್ಥಳಾಂತರಗೊಳ್ಳಬಹುದೆಂಬ ಚಿಂತನೆ ನನಗಿದೆ.**

ಈ ಆಂದೋಲನವು ಏಷ್ಯಾದಾದ್ಯಂತ ನಡೆಯುತ್ತಿದ್ದು ಎಲ್ಲಾ ಬೇರೆ ಬೇರೆ ದೇಶಗಳಲ್ಲೂ ಒಂದೇ ರೀತಿಯ ತಳಮಟ್ಟದ ವೇತನಕ್ಕಾಗಿ ಹೋರಾಡುತ್ತಿರುವುದರಿಂದ, ಎಲ್ಲಾ ಕಡೆಗಳಲ್ಲೂ ಕಂಪೆನಿಗಳು ಒಂದೇ ವೇತನದ ಬೇಡಿಕೆಯನ್ನು ಎದುರಿಸುತ್ತಿವೆ. ಅದಲ್ಲದೇ, ವಿಶ್ವದ ಬಟ್ಟೆಯ ಬಹು ಭಾಗ ಉತ್ಪಾದನೆಯು ಏಷ್ಯಾದಿಂದಲೇ ಆಗುತ್ತಿರುವುದರಿಂದ ಕಂಪೆನಿಗಳು ನಮ್ಮ ದುಡಿಮೆಯ ಮೇಲೆಯೇ  ಅವಲಂಭಿಸಿದ್ದಾರೆ. ನಮ್ಮ ಬಲವು ನಮ್ಮ ಐಕ್ಯತೆಯಿಂದ ಬರುತ್ತದೆ.

**ಕಂಪೆನಿಗಳು ನಮಗೆ ಹೆಚ್ಚಿನ ವೇತನವನ್ನು ಕೊಡಲು ಸಾಧ್ಯವೇ?**

ಒಂದು ಸಾಮಾನ್ಯ ಟೀ-ಶರ್ಟಿನ ಒಟ್ಟಾರೆ ಬೆಲೆಯಲ್ಲಿ, ಶ್ರಮದ ಮೇಲೆ ವೆಚ್ಚ ಮಾಡುವುದು ಕೇವಲ ಶೇ 3 ಕ್ಕಿಂತ ಕಡಿಮೆ ಇರುತ್ತದೆ. ಅಮೇರಿಕಾದಲ್ಲಿ ಮತ್ತು ಐರೋಪಿನಲ್ಲಿ ಬಟ್ಟೆ ಮಾರಾಟ ಮಾಡುವ ದೊಡ್ಡ ಅಂತರಾಷ್ಟ್ರೀಯ ಕಂಪೆನಿಗಳು, ಪ್ರತಿಯೊಂದು ಉಡುಪಿನ ಮೇಲೆ ಶೇ 75 ಕ್ಕಿಂತ ಹೆಚ್ಚಿನ ಲಾಭ ಗಳಿಸುತ್ತವೆ. ಗಾರ್ಮೆಂಟಿನ ನೈಜ ಉತ್ಪಾದಕರಾದ ನಮಗೆ, ಖಂಡಿತವಾಗಿಯೂ ಅವರು ಹೆಚ್ಚಿನ ವೇತನ ಕೊಡಬಲ್ಲರು.

Visit www.asiafloorwage.org to learn more.....

**International Coordinating Office & South Asia Coordination**
**Society for Labour & Development / Jobs with Justice**
New Delhi, India
anannya48@gmail.com, anannya@jwj.org

**Southeast Asia Coordination**
Trade Union Rights Centre
Jakarta, Indonesia
rita@turc.or.id, surya@turc.or.id

**East Asia Coordination**
Globalization Monitor
Hong Kong
Maywong@globalmon.org.hk

**Europe Coordination**
Clean Clothes Campaign
Amsterdam, The Netherlands
jeroen@cleanclothes.org

**UK Coordination**
Action Aid-UK
London
Dominic.Eagleton@actionaid.org

**United States Coordination**
Jobs with Justice
Washington, DC
sarita@jwj.org

**Your local contact:**

Design: invertedcommasindia@yahoo.com